ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ-ಸಿ3(7)ಪ್ರಾ.ಶಿ.ವರ್ಗ 01/2016-17

ದಿ: 29-09-2016

**ಜ್ಞಾಪನ**

ವಿಷಯ: 2016-17 ನೇ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಕೋರಿಕೆ ಮೇರೆಗೆ ಕೌನ್ಸಿಲಿಂಗ್ ಮೂಲಕ ಅಂತರ್‌ಘಟಕ ವರ್ಗಾವಣೆ ಬಗ್ಗೆ:

******

## ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ಅಂತರ ಘಟಕ – ವರ್ಗಾವಣೆ ಕೌನ್ಸಿಲಿಂಗ್ ವೇಳಾಪಟ್ಟಿ

| ಕ್ರ ಸಂ | ದಿನಾಂಕ | ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಕ್ರಮಸಂಖ್ಯೆಗಳಂತೆ |
|---|---|---|
| 1 | 01-10-2016 ಶನಿವಾರ | 1251 ರಿಂದ 1500 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| 2 | 01-10-2016 ಶನಿವಾರ | 501 ರಿಂದ 700 ರವರೆಗಿನ **ಪ್ರೌಢಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |

| ಕ್ರ ಸಂ | ದಿನಾಂಕ | ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಕ್ರಮಸಂಖ್ಯೆಗಳಂತೆ |
|---|---|---|
| 1 | 02-10-2016 ಭಾನುವಾರ | 1501 ರಿಂದ 1650 ರವರೆಗಿನ **ಪ್ರಾಥಮಿಕ ಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |
| 2 | 02-10-2016 ಭಾನುವಾರ | 701 ರಿಂದ 850 ರವರೆಗಿನ **ಪ್ರೌಢಶಾಲಾ** ಸಹಶಿಕ್ಷಕರು ( ನಾಲ್ಕು ವಿಭಾಗಗಳು ಸೇರಿ) |

(ದೈಹಿಕ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರುಗಳ ಕೌನ್ಸಿಲಿಂಗ್‌ನ್ನು ಸಹಶಿಕ್ಷಕರ ಕೌನ್ಸಿಲಿಂಗ್ ಮುಗಿದ ನಂತರ ಹಮ್ಮಿಕೊಳ್ಳಲಾಗುವುದು)

**ಕೌನ್ಸಿಲಿಂಗ್ ನಡೆಯುವ ಸ್ಥಳ:**

1. ಬೆಂಗಳೂರು ವಿಭಾಗ – ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು -02
2. ಮೈಸೂರು ವಿಭಾಗ – ಸಹನಿರ್ದೇಶಕರ ಕಛೇರಿ , ಸಾ.ಶಿ.ಇಲಾಖೆ, ರಾಮಸ್ವಾಮಿ ಸರ್ಕಲ್, ಮೈಸೂರು
3. ಕಲಬುರಗಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ ಕಲಬುರ್ಗಿ.
4. ಬೆಳಗಾವಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಡಯಟ್ ಸಭಾಂಗಣ, ಧಾರವಾಡ .

ಬೆಳಿಗ್ಗೆ: 09-30 ರಿಂದ ಪ್ರಾರಂಭ.

ಕೌನ್ಸಿಲಿಂಗ್‌ನಲ್ಲಿ ಹಾಜರಾಗುವ ಶಿಕ್ಷಕರುಗಳು ಬಿ.ಇ.ಓ ಇವರಿಂದ ಅನುಮೋದಿತ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುವುದು.

1. ವರ್ಗಾವಣೆಯ ಅರ್ಜಿ ಬಿ.ಇ.ಓ ಅನುಮೋದಿತ ಪ್ರತಿ ಮತ್ತು ಸೇವಾ ದೃಢೀಕರಣ ಪತ್ರ.
2. ಸಂಬಂಧಪಟ್ಟ ಬಿ.ಇ.ಓ / ಉಪನಿರ್ದೇಶಕರಿಂದ ವೈದ್ಯಕೀಯ ವೆಚ್ಚದ ಮರುಪಾವತಿ ಪಡೆದ ಬಗ್ಗೆ ದೃಢೀಕರಣಪತ್ರ.
3. ನೇಮಕಾತಿ ಆದೇಶ ಪತ್ರ ಮತ್ತು ಕಳೆದ ಬಾರಿ ವರ್ಗಾವಣೆ ಪಡೆದಿದ್ದಲ್ಲಿ ವರ್ಗಾವಣಾ ಆದೇಶದ ಪ್ರತಿ.
4. ಶಿಕ್ಷಕರ ಇತ್ತೀಚಿನ ಹೆಚ್.ಆರ್. ಎಂ.ಎಸ್ ವೇತನ ಪತ್ರ.
5. ಗುರುತಿನ ಪತ್ರ , ಮತದಾರರ ಚೀಟಿ, ಆಧಾರ್ ಕಾರ್ಡ್
6. ವರ್ಗಾವಣೆ ಅಧಿನಿಯಮ ಜಾರಿಗೆ ಬಂದನಂತರ ಇದೇ ಮೊದಲನೇ ಬಾರಿಗೆ ಘಟಕದ ಹೊರಗೆ ವರ್ಗಾವಣೆ ಪಡೆಯುತ್ತಿದ್ದೇನೆ ಎಂಬ ಬಗ್ಗೆ ಮುಚ್ಚಳಿಕೆ ಪತ್ರ
7. **ವಿಧವಾ ಪ್ರಕರಣ** --- ಪತಿಯ ಮರಣ ಪ್ರಮಾಣ ಪತ್ರ.
8. **ಪತಿ/ಪತ್ನಿ ಅನುಧಾನಿತ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಹೆಚ್.ಆರ್.ಎಂ.ಎಸ್** ವೇತನ ಪತ್ರ.
9. **ಸೈನಿಕ ಪ್ರಕರಣಗಳಲ್ಲಿ** ಸಂಬಂಧಿಸಿದ **ಪ್ರಾಧಿಕಾರ** ನೀಡಿರುವ ಮೂಲ ಗುರಿತಿನ **ಚೀಟಿ** ಮತ್ತು ಸೇವಾ **ದೃಢೀಕರಣ** ಪತ್ರ.
10. **ಶಿಕ್ಷಕರ ಸಂಘದ/ಸರ್ಕಾರಿ ನೌಕರರ ಸಂಘದ ಚುನಾಯಿತ ಪ್ರತಿನಿಧಿಯಾಗಿದ್ದಲ್ಲಿ ಮಾತ್ರ ಸಂಬಂಧಪಟ್ಟ ಪ್ರಾಧಿಕಾರ** ನೀಡಿರುವ **ಪ್ರಮಾಣ ಪತ್ರ. ಶಿಕ್ಷಕರು ಯಾವ ಘಟಕದಲ್ಲಿ ಚುನಾಯಿತರಾಗಿದ್ದಾರೆಂಬ ಬಗ್ಗೆ ದೃಢೀಕರಣ ಪತ್ರ.**
11. ಪತಿ-ಪತ್ನಿಯ ಸಂಬಂಧ ಸೂಚಿಸುವ ದಾಖಲೆ (ನಾಮನಿರ್ದೇಶನ, ಮತದಾರರ ಚೀಟಿ, ಆಧಾರ್ ಕಾರ್ಡ್)
12. ಕೆ.ಎ.ಟಿ ಯಿಂದ ಮಧ್ಯಂತರ ಆದೇಶವನ್ನು ಪಡೆದಿರುವ ಎಸ್.ಎಸ್.ಎ ಸಹಶಿಕ್ಷಕರು/ಎಸ್.ಎಸ್.ಎ-ಟಿ.ಜಿ.ಟಿ ಶಿಕ್ಷಕರು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸುವಾಗ ನ್ಯಾಯಾಲಯದ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುವುದು.

(ಕೆ. ಆನಂದ)

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಹಾಗೂ ರಾಜ್ಯ ಮಟ್ಟದ ವರ್ಗಾವಣಾ ಪ್ರಾಧಿಕಾರಿಗಳು,